ಕಾಯ್ದೆಯಲ್ಲಿ ವಿಶಿಷ್ಟವಾಗಿ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಪ್ರತ್ಯೇಕ ಅಧಿಕಾರ ಮತ್ತು ಕಾರ್ಯ ವ್ಯಾಪ್ತಿಗಳನ್ನು ನಿಗಧಿಪಡಿಸಿರುವುದಿಲ್ಲ.

ಆ) ಸರ್ಕಾರದಿಂದ ನಾಮ ನಿರ್ದೇಶನಗೊಂಡು ನೇಮಕವಾದ ಸದಸ್ಯರುಗಳಿಗೆ ಅಧ್ಯಕ್ಷರು ಲಿಖಿತ ನೋಟಿಸು ನೀಡಲು ಅವಕಾಶವಿರುವುದಿಲ್ಲ. ಭೂ ನ್ಯಾಯ ಮಂಡಳಿಯ ಕಾರ್ಯದರ್ಶಿಗಳು ಮಾತ್ರ ಸಾಮಾನ್ಯವಾಗಿ ನೋಟಿಸ್ ನೀಡುತ್ತಾರೆ.

ಇ) ಭು ಸುಧಾರಣಾ ಕಾಯ್ದೆಯಲ್ಲಿ ವಿಶಿಷ್ಟವಾಗಿ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಪ್ರತ್ಯೇಕ ಅಧಿಕಾರ ಮತ್ತು ಕಾರ್ಯ ವ್ಯಾಪ್ತಿಗಳನ್ನು ನಿಗಧಿಪಡಿಸಿರುವುದಿಲ್ಲ. ಈಗಾಗಲೇ ಮೇಲಿನ ಅಂಶ (ಅ)ರಲ್ಲಿ ವಿವರಿಸಿರುವ ಪ್ರಕ್ರಿಯೆಯಲ್ಲಿ ಸದಸ್ಯರು ಸಹ ಭಾಗವಹಿಸುತ್ತಾರೆ.

ಸಹಾಯಕ ನಿರ್ದೇಶಕರ ಹುದ್ದೆಗಳ ಮಾಹಿತಿ

964(2015); ಶ್ರೀ ಗೋಪಾಲ ಪೂಜಾರಿ .ಕೆ (ಬೈಂದೂರು)

ಅ) ಕುಂದಾಪುರ ತಾಲ್ಲೂಕು ವ್ಯಾಪ್ತಿಯ ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕರ ಕಛೇರಿಗೆ ಮಂಜೂರಾದ ಹುದ್ದೆಗಳೆಷ್ಟು;

ಆ) ಆ ಪೈಕಿ ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು;

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ. ಅಭಯಚಂದ್ರ (ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು)

ಅ) ಕುಂದಾಪುರ ತಾಲ್ಲೂಕಿನ ಮೀನುಗಾರಿಕೆ ಇಲಾಖೆ ಕಛೇರಿಗೆ ಈ ಕೆಳಕಂಡಂತೆ ಹುದ್ದೆಗಳು ಮಂಜೂರಾಗಿರುತ್ತವೆ.

ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2) –01

ಮೀನುಗಾರಿಕೆ ಹಿರಿಯ ಮೇಲ್ವಿಚಾರಕರು –01

ಮೀನುಗಾರಿಕೆ ಮೇಲ್ವಿಚಾರಕರು	–01
ದ್ವಿತೀಯ ದರ್ಜೆ ಸಹಾಯಕರು	–01
ಮೀನುಗಾರಿಕೆ ಕ್ಷೇತ್ರಪಾಲಕರು	–03
ಗ್ರೂಪ್–ಡಿ	–01
ಒಟ್ಟು:–	08

ಆ) ಭರ್ತಿ ಮಾಡಲಾದ ಹುದ್ದೆ

ಮೀನುಗಾರಿಕೆ ಮೇಲ್ವಿಚಾರಕರು	–01

ಖಾಲಿ ಇರುವ ಹುದ್ದೆಗಳು ಕೆಳಕಂಡಂತಿವೆ.

ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇಣಿ–2)	–01
ಮೀನುಗಾರಿಕೆ ಹಿರಿಯ ಮೇಲ್ವಿಚಾರಕರು	–01
ದ್ವಿತೀಯ ದರ್ಜೆ ಸಹಾಯಕರು	–01
ಮೀನುಗಾರಿಕೆ ಕ್ಷೇತ್ರಪಾಲಕರು	–03
ಗ್ರೂಪ್–ಡಿ	–01
ಒಟ್ಟು:–	07

ಇ) ಮೀನುಗಾರಿಕೆ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ಶ್ರೇಣಿಯ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.